ಕರ್ನಾಟಕ Government ಸರ್ಕಾರ of Karnataka
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATIONAL RESEARCH AND TRAINING
No 4, 100 FT RING ROAD, BANASHANKARI 3 RD STAGE BENGALURU - 560 085
Email: dpi.dsert-ka@nic.in Website: http://dsert.kar.nic.in
Phone - 080 26980100
Fax - 080 26422377
ಡಿಎಸ್ಇಆರ್‌ಟಿ DSERT

**ಸಂಖ್ಯೆ:ಎಸ್.ಎಸ್.ಕೆ/ಪ್ರೌಢ/ನಿಷ್ಠಾ-2.0 ತರಬೇತಿ/03/2021-22** **ದಿನಾಂಕ 23.07.2021**

# ಜ್ಞಾಪನ

ವಿಷಯ : ನಿಷ್ಠಾ -2.0 ಆನ್‌ಲೈನ್ ತರಬೇತಿಯಲ್ಲಿ ವಿವಿಧ ಹಂತದ ಅಧಿಕಾರಿಗಳು ಮತ್ತು ಸಮಿತಿಯ ಪಾತ್ರ ಮತ್ತು ಜವಾಬ್ದಾರಿಗಳು.

*****

ನಿಷ್ಠಾ ಆನ್‌ಲೈನ್ ತರಬೇತಿಯು ಅತ್ಯಂತ ಮಹತ್ವವಾದ ತರಬೇತಿ ಕಾರ್ಯಕ್ರಮವಾಗಿದ್ದು ಪ್ರೌಢಶಾಲಾ ಶಿಕ್ಷಕರಿಗೆ ರಾಷ್ಟ್ರಾದ್ಯಂತ ಏಕಸ್ವರೂಪದಲ್ಲಿ ಎಲ್ಲಾ ಶಿಕ್ಷಕರನ್ನು ತಲುಪಲಿದೆ. ಈ ಕಾರ್ಯಕ್ರಮವು ತನ್ನ ಸ್ವರೂಪಕ್ಕೆ ಅನುಗುಣವಾಗಿ ಅನುಷ್ಠಾನವಾಗಲು ಎಲ್ಲಾ ಹಂತದ ಉಸ್ತುವಾರಿ ಅಧಿಕಾರಿಗಳು ಕೈಜೋಡಿಸಬೇಕಿದೆ. ಈ ನಿಟ್ಟಿನಲ್ಲಿ ವಿವಿಧ ಅಧಿಕಾರಿಗಳಿಗೆ ವಿವಿಧ ಪಾತ್ರ ಮತ್ತು ಜವಾಬ್ದಾರಿಗಳನ್ನು ನಿಗಧಿಪಡಿಸಲಾಗಿದೆ.

## A) ಬ್ಲಾಕ್ ಹಂತದ ತಾಂತ್ರಿಕ ಮತ್ತು ಅನುಷ್ಠಾನ ಸಮಿತಿಯ ಪಾತ್ರ ಮತ್ತು ಜವಾಬ್ದಾರಿ : (Block level technical and Implementation Committee) – 06 ಜನ

**ಬ್ಲಾಕ್ ಹಂತದ ತಂಡ (ಕೆ.ಆರ್.ಪಿ ಗಳು)**

I. ಕ್ಷೇತ್ರ ಶಿಕ್ಷಣಾಧಿಕಾರಿಗಳು
II. ಬಿ.ಆರ್.ಸಿ( ಕೆ.ಆರ್.ಪಿ)
III. ಪ್ರೌಢ ಹಂತದ ಬಿ.ಆರ್.ಪಿಗಳು (ಕೆ.ಆರ್.ಪಿ) – **ಇಬ್ಬರು (ತಾಂತ್ರಿಕ ಅನುಭವವುಳ್ಳ ಬಿ.ಆರ್.ಪಿಗಳು)**
IV. ಟಾಲ್ಪ್ ಸಂಪನ್ಮೂಲ ವ್ಯಕ್ತಿ (ಕೆ.ಆರ್.ಪಿ) – **ಒಬ್ಬರು**
V. ಕಂಪ್ಯೂಟರ್ ಪ್ರೋಗ್ರಾಮರ್– **ಒಬ್ಬರು**

1. ನಿಷ್ಠಾ-2.0 ತರಬೇತಿಗೆ ಸಂಬಂಧಿಸಿದಂತೆ ಟೆಲಿಗ್ರಾಮ್ ಗ್ರೂಪ್ ರಚಿಸಿ ಶಿಕ್ಷಕರಿಗೆ ಸೂಕ್ತ ತಾಂತ್ರಿಕ ಬೆಂಬಲಗಳನ್ನು ಒದಗಿಸಿ ಯಶಸ್ವಿಯಾಗಿ ಶಿಕ್ಷಕರು ಪೂರ್ಣ ತರಬೇತಿಯನ್ನು ಹೊಂದುವಂತೆ ಕ್ರಮವಹಿಸುವುದು.

   **ಟೆಲಿಗ್ರಾಮ್ ಗ್ರೂಪ್‌ನ್ನು ಈ ಕೆಳಕಂಡಂತೆ ರಚಿಸಿಕೊಳ್ಳುವುದು.**

   **ಗುಂಪು-01 :** ಗಣಿತ ಮತ್ತು ವಿಜ್ಞಾನ ಬೋಧಿಸುತ್ತಿರುವ ಶಿಕ್ಷಕರ ಗುಂಪು.
   **ಗುಂಪು-02 :** ಕನ್ನಡ ಮತ್ತು ಸಮಾಜ ವಿಜ್ಞಾನ ಬೋಧಿಸುತ್ತಿರುವ ಶಿಕ್ಷಕರ ಗುಂಪು.
   **ಗುಂಪು-03 :** ಇಂಗ್ಲೀಷ್, ಹಿಂದಿ ಮತ್ತು ಇತರೆ ಭಾಷಾ ವಿಷಯಗಳ ಗುಂಪು.
   **ಗುಂಪು-04 :** ದೈಹಿಕ ಶಿಕ್ಷಣ, ಕ್ರಾಫ್ಟ್ ಮತ್ತು ಇತ್ಯಾದಿ ವಿಶೇಷ ಶಿಕ್ಷಕರ ಗುಂಪು.

   ಈ ಮೇಲ್ಕಂಡಂತೆ ಬ್ಲಾಕ್ ಹಂತದ ಸದಸ್ಯರು(04 ಜನ ಕೆ.ಆರ್.ಪಿಗಳು) ಟೆಲಿಗ್ರಾಮ್ ಗ್ರೂಪ್ ಸೃಜಿಸಲು ಬಿ.ಆರ್.ಸಿರವರು ಅಗತ್ಯ ಕ್ರಮವಹಿಸುವುದು ಬಿ.ಇ.ಓ ರವರು ಮತ್ತು ಕಂಪ್ಯೂಟರ್ ಪ್ರೋಗ್ರಾಮರ್‌ರವರು ಎಲ್ಲಾ ಗುಂಪಿನ ಸದಸ್ಯರಾಗಿರಲಿ. ಆಯಾಯ ಗುಂಪಿನ ವಿಷಯಕ್ಕೆ ಸಂಬಂಧಿಸಿದ ವಿಷಯ ಪರಿವೀಕ್ಷಕರುಗಳನ್ನು ಶೈಕ್ಷಣಿಕ ಚರ್ಚೆಯ ಭಾಗವಾಗಿ ಸೇರ್ಪಡೆ ಮಾಡಿಕೊಳ್ಳುವುದು. ವಿಷಯವಾರು ಪೆಡಗಜಿ ಮತ್ತು ಜನರಿಕ್ ಕೋರ್ಸ್‌ಗಳಿಗೆ ಕೆ.ಆರ್.ಪಿ ಮತ್ತು ವಿಷಯ ಪರಿವೀಕ್ಷಕರು ವೆಬಿನಾರ್‌ಗಳನ್ನು ಸ್ವತಃ ಅವರೇ ನಡೆಸುವುದು ಕಡ್ಡಾಯ. ಈ ಗುಂಪಿನಲ್ಲಿ ನಿಷ್ಠಾ-2.0 ತರಬೇತಿಯ ಅಂಶಗಳನ್ನು ಹೊರತುಪಡಿಸಿ ಬೇರೆ ಯಾವುದೇ ಚರ್ಚೆಗಳನ್ನು ಮಾಡದಂತೆ ನಿಗವಹಿಸುವ ಜವಾಬ್ದಾರಿ ಬಿ.ಆರ್.ಸಿರವರದ್ದಾಗಿರುತ್ತದೆ.

2. 04 ಜನ ಕೆ.ಆರ್.ಪಿಗಳಿಗೆ ಹಂಚಿಕೆ ಮಾಡಿರುವ ಶಿಕ್ಷಕರ ಪಟ್ಟಿಯನ್ನು ಕಳೆದ ಸಾಲಿನ ನಮೂನೆಯಂತೆ ಸಿದ್ಧಪಡಿಸಿ ಡಯಟ್‌ಗೆ ಸಲ್ಲಿಸುವುದು.

3. ಬಿ.ಆರ್.ಸಿರವರು ಎಲ್ಲಾ ಶಿಕ್ಷಕರು ಈ ತರಬೇತಿಗೆ ನೋಂದಣಿ ಆಗಿರುವುದನ್ನು ಖಚಿತ ಪಡಿಸಿಕೊಳ್ಳಬೇಕು ಅತಿ ಕಡಿಮೆ ನೋಂದಣಿಯಾಗಿರುವ ಶಾಲೆಯ ಮುಖ್ಯ ಶಿಕ್ಷಕರ ಜೊತೆ ಆಗಾಗ್ಗೆ ಚರ್ಚಿಸುತ್ತಾ ಅತೀ ಶೀಘ್ರದಲ್ಲಿ ಪ್ರಗತಿ ಸಾಧಿಸಬೇಕು.
4. ಸಮಿತಿ ಸದಸ್ಯರೂ ಕೂಡ ಈ ಕೋರ್ಸ್‌ನಲ್ಲಿ ನೋಂದಣಿಯಾಗಿ ಈ ಕೋರ್ಸ್‌ಅನ್ನು ಪೂರ್ಣಗೊಳಿಸಿ ಅದರಲ್ಲಿ ಇರತಕ್ಕಂತಹ ಅಂಶಗಳನ್ನು ಮನನ ಮಾಡಿಕೊಳ್ಳಬೇಕು.
5. ಈ ಕೋರ್ಸ್ ನ ಶೈಕ್ಷಣಿಕ ಮಾಹಿತಿಯನ್ನು ಒದಗಿಸುತ್ತ ಅವರ ಜೊತೆ ಚರ್ಚೆಗಳಲ್ಲಿ ಪಾಲ್ಗೊಂಡು ಅವರು ಸರಿಯಾದ ಮಾರ್ಗದಲ್ಲಿ ವಿಷಯಗಳನ್ನು ಗ್ರಹಿಸುತ್ತಿರುವುದನ್ನು ಖಾತ್ರಿ ಪಡಿಸಿಕೊಳ್ಳಬೇಕು .
6. ಪ್ರತಿ ತಿಂಗಳ ಮೊದಲ ಸೋಮವಾರ ಬ್ಲಾಕ್ ಹಂತದ ಸಮಿತಿಯ ಆನ್‌ಲೈನ್ ಸಭೆಯನ್ನು ಹಾಗೂ ಮೂರನೆ ಸೋಮವಾರ ಮುಖಾ-ಮುಖಿ ಸಭೆಯನ್ನು ಬಿ.ಆರ್.ಸಿರವರು ಆಯೋಜಿಸಿ ಪ್ರತಿ ಶಾಲೆಯ ಪ್ರತಿ ಶಿಕ್ಷಕರ ತಾಂತ್ರಿಕ ಮತ್ತು ಶೈಕ್ಷಣಿಕ ಅಂಶಗಳನ್ನು ಚರ್ಚಿಸಿ ನಡಾವಳಿ ರಚಿಸುವುದು.
7. ಬ್ಲಾಕ್ ಹಂತದ ಅಸೆಸ್ಮೆಂಟ್ ಪರೀಕ್ಷೆಗಳಲ್ಲಿನ ಸಾಧನೆಯ ಹಿನ್ನೆಲೆಯಲ್ಲಿ ವಿವಿಧ ಪೆಡಾಗಜಿಗಳಲ್ಲಿ ಚರ್ಚೆಯ ಅಂಶಗಳನ್ನು ಗುರುತಿಸಿ ಅದು ಮತ್ತು ನಿಷ್ಠಾ ತರಬೇತಿಗೆ ಇರುವ ನೇರ ಸಂಬಂಧವನ್ನು ಶಿಕ್ಷಕರಿಗೆ ಸ್ಪಷ್ಟಪಡಿಸಬೇಕು. ಈ ಸಂಬಂಧ ಸಣ್ಣ ಸಣ್ಣ ವೀಡಿಯೊ ಸಂದೇಶಗಳನ್ನು ಸೃಷ್ಠಿಸಿ ಶಿಕ್ಷಕ ಬಳಗದ ಜೊತೆ ಹಂಚಿಕೊಳ್ಳಬೇಕು. ಪ್ರತಿ ವಾರ ಶಿಕ್ಷಕರ ತರಬೇತಿಯ ಪ್ರಗತಿಯನ್ನು ಪಡೆದು ಕ್ರೂಢೀಕರಿಸಿ ಬ್ಲಾಕ್‌ನ ಪ್ರಗತಿಯನ್ನು ಸಿದ್ಧಪಡಿಸಿ ಡಯಟ್ ಜೊತೆ ಹಂಚಿಕೊಳ್ಳಬೇಕು.
8. ಬ್ಲಾಕ್ ಹಂತದಲ್ಲಿ ಮುಖ್ಯವಾಗಿ ಈ ಎಲ್ಲಾ ತರಬೇತಿಗಳ ಪೂರ್ಣ ಜವಾಬ್ದಾರಿ ಕ್ಷೇತ್ರ ಶಿಕ್ಷಣಾಧಿಕಾರಿಗಳದ್ದಾಗಿರುತ್ತದೆ. ಬಿ.ಆರ್.ಸಿ ರವರು ಕ್ಷೇತ್ರ ಶಿಕ್ಷಣಾಧಿಕಾರಿಗಳ ಈ ಕಾರ್ಯದಲ್ಲಿ ಪೂರ್ಣ ಸಹಕಾರವನ್ನು ನೀಡಬೇಕು.
9. ಮಾಹೆವಾರು ಶಿಕ್ಷಕರ ತರಬೇತಿಯ ಪ್ರಗತಿ ಹಾಗೂ ಕೋರ್ಸ್‌ಗಳನ್ನು ಪೂರ್ಣಗೊಳಿಸುತ್ತಿರುವ ದತ್ತಾಂಶಗಳನ್ನು ವಿಶ್ಲೇಷಿಸಿ ಸೂಕ್ತ ಮಾರ್ಗದರ್ಶನವನ್ನು ನೀಡಬೇಕು.
10. ಯಾವುದಾದರೂ ಶಿಕ್ಷಕರು ತಾಂತ್ರಿಕ ಸಮಸ್ಯೆಗಳಿಂದ ಈ ಕೋರ್ಸಿಗೆ ಜಾಯಿನ್ ಆಗಲು ಆಗಿಲ್ಲವೆಂದರೆ, ತಕ್ಷಣ ತಮ್ಮ ಬ್ಲಾಕ್ ಹಂತದ ಪ್ರೋಗ್ರಾಮರ್ ಗಳಿಂದ ತಾಂತ್ರಿಕ ನೆರವನ್ನು ಒದಗಿಸಬೇಕು. ಇದರಲ್ಲಿ TALP ಸಂಪನ್ಮೂಲ ವ್ಯಕ್ತಿಗಳ ಸಹಾಯವನ್ನು ಕೂಡ ಪಡೆಯಬಹುದು.
11. ತಮಗೆ ಹಂಚಿಕೆಯಾದ ಯಾವ ಶಿಕ್ಷಕರೂ ನಿಷ್ಠಾ ಆನ್‌ಲೈನ್ ತರಬೇತಿಯಲ್ಲಿ ನೋಂದಣಿಯಾಗದೆ ಉಳಿಯದಂತೆ ಕ್ರಮವಹಿಸುವುದು ಹಾಗೂ ಸರಿಯಾದ ವೇಗದಲ್ಲಿ ತರಬೇತಿಯ ಎಲ್ಲಾ ಚಟುವಟಿಕೆಗಳನ್ನು ಪೂರ್ಣಗೊಳಿಸಿರುವುದನ್ನು ಖಾತ್ರಿಪಡಿಸಿಕೊಳ್ಳುವುದು.
12. ಸ್ಮಾರ್ಟ್‌ಫೋನ್ ಹೊಂದಿರದ ಅಥವಾ ಬಳಸಲು ಬಾರದಿರುವ ಶಿಕ್ಷಕರು ತಮ್ಮ ಗ್ರೂಪ್‌ನಲ್ಲಿ ಇದ್ದಲ್ಲಿ ಅವರಿಗೆ ಪೀರ್‌ಗ್ರೂಪ್ ಬೆಂಬಲವನ್ನು ಒದಗಿಸಲು ಕ್ರಮ ವಹಿಸುವುದು. ಇಂತಹ ಶಿಕ್ಷಕರ ಶಾಲೆಗಳಿಗೆ ಅಥವಾ ಶಿಕ್ಷಕರಿರುವ ಸ್ಥಳಕ್ಕೆ ಭೇಟಿ ನೀಡಿ ನಿಷ್ಠಾ ತರಬೇತಿ ಕೈಪಿಡಿಯ ವಿಚಾರಗಳನ್ನು ಚರ್ಚಿಸುವುದು ಮತ್ತು ಚರ್ಚೆಯಲ್ಲಿ ಅವರು ಪಾಲ್ಗೊಳ್ಳುವಂತೆ ಮಾಡುವುದು .
13. ಕೋರ್ಸ್‌ವಾರು ಆನ್‌ಲೈನ್-ವೆಬಿನಾರ ವಿಷಯಗಳನ್ನು ತಮ್ಮ ಟೆಲಿಗ್ರಾಮ್ ಗ್ರೂಪ್‌ನಲ್ಲಿ ಹಂಚಿಕೆ ಮಾಡಿಕೊಂಡು ಶಿಕ್ಷಕರು ಕೋರ್ಸ್ ಪೂರ್ಣಗೊಳಿಸಲು ಅಗತ್ಯ ಬೆಂಬಲ ನೀಡುವುದು. ಕೆ.ಆರ್.ಪಿ ಹಂತದಲ್ಲಿ ಹೆಚ್ಚಿನ ಅಗತ್ಯತೆ ಇರುವ ಅಂಶಗಳಿಗೆ ಆನ್‌ಲೈನ್ -ವೆಬಿನಾರ್ ಆಯೋಜಿಸುವುದು.
14. ಶಿಕ್ಷಕರಿಗೆ ಈ ಕೋರ್ಸ್‌ಅನ್ನು ತೆಗೆದುಕೊಳ್ಳಲು ಹಾಗೂ ಕಾಲಮಿತಿಯೊಳಗೆ ಪೂರ್ಣಗೊಳಿಸಲು ಉತ್ತೇಜನವನ್ನು ನೀಡಬೇಕು.
15. ತರಬೇತಿ ಪ್ರಗತಿಯನ್ನು ನಿಗದಿತ ದಿನಾಂಕದೊಳಗೆ ಡಯಟ್ ನೋಡಲ್ ಅಧಿಕಾರಿಗೆ ಸಲ್ಲಿಸುವುದು.
16. ಕಾಲಕಾಲಕ್ಕೆ ಇಲಾಖೆ ಸೂಚಿಸಿದ ಇನ್ನಿತರೆ ಪಾತ್ರ ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುತ್ತಾ ತರಬೇತಿಯ ಯಶಸ್ವಿ ಅನುಷ್ಠಾನಕ್ಕೆ ಸಹಕರಿಸಬೇಕು.

## B) ಜಿಲ್ಲಾ ಹಂತದ ತಾಂತ್ರಿಕ ಮತ್ತು ಅನುಷ್ಠಾನ ಸಮಿತಿಯ ಪಾತ್ರ ಮತ್ತು ಜವಾಬ್ದಾರಿ (District level technical and implementation committee) - 15 ಜನ ಡಿ.ಆರ್.ಪಿ

I. ಉಪನಿರ್ದೇಶಕರು (ಆಡಳಿತ)
II. ಉಪನಿರ್ದೇಶಕರು (ಅಭಿವೃದ್ಧಿ)
III. ಡಯಟ್ ನಿಷ್ಠಾ-2.0 ನೋಡಲ್ ಅಧಿಕಾರಿ
IV. ಜಿಲ್ಲಾ ಹಂತದ ಪ್ರೋಗ್ರಾಮರ್- ಒಬ್ಬರು
V. ವಿಷಯ ಪರಿವೀಕ್ಷಕರು – 07 ಜನ
VI. ಇತರ ವಿಷಯಗಳ ಸಂಪನ್ಮೂಲ ವ್ಯಕ್ತಿಗಳು – 2 ಜನ (ವಿಷಯ ಪರಿವೀಕ್ಷಕರ ಪ್ರತಿನಿಧಿಸುವ ವಿಷಯಗಳು/ಮಾಧ್ಯಮಗಳನ್ನು ಹೊರತುಪಡಿಸಿ)
VII. ಟಾಲ್ಪ್ ಸಂಪನ್ಮೂಲ ವ್ಯಕ್ತಿ – 2 ಜನ

1. ಜಿಲ್ಲಾ ಹಂತದಲ್ಲಿ ಮೆಲ್ಕಂಡ ಸದಸ್ಯರುಗಳುಳ್ಳ ಒಂದು ಟೆಲಿಗ್ರಾಂ ಗುಂಪನ್ನು ಡಯಟ್‌ನ ನೋಡಲ್ ಅಧಿಕಾರಿಗಳು ರಚಿಸುವುದು. ಈ ಗುಂಪಿನಲ್ಲಿ ನಿಷ್ಠಾ-2.0 ತರಬೇತಿಯ ಅಂಶಗಳನ್ನು ಹೊರತುಪಡಿಸಿ ಬೇರೆ ಯಾವುದೇ ಚರ್ಚೆಗಳನ್ನು ಮಾಡದಂತೆ ನಿಗವಹಿಸುವ ಜವಾಬ್ದಾರಿ ಡಯಟ್‌ನ ನೋಡಲ್ ಅಧಿಕಾರಿ ರವರದ್ದಾಗಿರುತ್ತದೆ.
2. ನಿಷ್ಠಾ ಆನ್ ಲೈನ್‌ತರಬೇತಿಗೆ ಸಂಬಂಧಿಸಿದಂತೆ ಉಪನಿರ್ದೇಶಕರು(ಆಡಳಿತ) ರವರ ಪಾತ್ರ ಅತ್ಯಂತ ಮಹತ್ವದ್ದಾಗಿದ್ದು ಅವರಿಗೆ ಇದರ ಪ್ರಗತಿ ಸಾಧನೆಯ ಜವಾಬ್ದಾರಿವಹಿಸಿದೆ. ಕಾಲಕಾಲಕ್ಕೆ ಪ್ರಗತಿಯನ್ನು ಉಪನಿರ್ದೇಶಕರು(ಅಭಿವೃದ್ಧಿ)ರವರ ಸಹಯೋಗದಲ್ಲಿ ಪೂರ್ಣಗುರಿ ಸಾಧಿಸುವುದು. ಪ್ರಗತಿ ವರದಿಯನ್ನು ಸಂಬಂಧಿಸಿದ ಸಿ.ಟಿ.ಇಗಳಿಗೆ ಕಾಲಕಾಲಕ್ಕೆ ವರದಿ ಮಾಡುವುದು.
3. ಜಿಲ್ಲಾ ಮತ್ತು ಬ್ಲಾಕ್ ಹಂತದಲ್ಲಿ ಈ ಕಾರ್ಯಕ್ರಮದ ಅನುಷ್ಠಾನಕ್ಕೆ ಬೇಕಾದ ಎಲ್ಲಾ ರೀತಿಯ ತಾಂತ್ರಿಕ ಬೆಂಬಲ ಮತ್ತು ಆಡಳಿತಾತ್ಮಕ ಬೆಂಬಲವನ್ನು ನೀಡುವುದು. ತರಬೇತಿ ಅನುಷ್ಠಾನದ ಸಂದರ್ಭದಲ್ಲಿ ಎದುರಾಗುವ ತಾಂತ್ರಿಕ ಸಮಸ್ಯೆಗಳನ್ನು ಬಗೆಹರಿಸಲು ತಮ್ಮದೇ ಕಛೇರಿಯ ಕಂಪ್ಯೂಟರ್ ಪ್ರೋಗ್ರಾಮರ್‌ರವರ ಸಹಕಾರ ಪಡೆದು ಉಪನಿರ್ದೇಶಕರು(ಆಡಳಿತ)ರವರು ಕ್ರಮವಹಿಸುವುದು.
4. ಡಯಟ್‌ನ ವಿಷಯವಾರು ಸಂಪನ್ಮೂಲ ಅಧಿಕಾರಿಗಳು ವಿಷಯ ಪರಿವೀಕ್ಷಕರು ಹಾಗೂ ಜಿಲ್ಲಾ ಹಂತದ ತಾಂತ್ರಿಕ ತಂಡದ ಇತರ ಸದಸ್ಯರು ಡಯಟ್ ಹಂತದಲ್ಲಿ ಕಾರ್ಯಕ್ರಮ ಅನುಷ್ಠಾನ ಮತ್ತು ತಾಂತ್ರಿಕ ಬೆಂಬಲ ನೀಡುವುದು.
5. ವಿಷಯ ಪರಿವೀಕ್ಷಕರು ಮತ್ತು ಡಯಟ್‌ನ ವಿಷಯ ಸಂಪನ್ಮೂಲ ಅಧಿಕಾರಿಗಳು ಬ್ಲಾಕ್ ಹಂತದಲ್ಲಿ ರಚಿಸಿರುವ ಟಿಲಿಗ್ರಾಮ್ ಗ್ರೂಪ್‌ನಲ್ಲಿ ಬರುವ ತಾಂತ್ರಿಕ ಮತ್ತು ಶೈಕ್ಷಣಿಕ ಸಮಸ್ಯೆಗಳಿಗೆ ಪರಿಹಾರ ಒದಗಿಸುವುದು.
6. ಪ್ರತಿ 15 ದಿನಗಳಿಗೊಮ್ಮೆ ಸಭೆ ನಡೆಸಿ ಪ್ರಗತಿ ಪರಿಶೀಲಿಸುವುದು.
7. ಆನ್‌ಲೈನ್ ತರಬೇತಿಗೆ ಬೆಂಬಲವಾಗಿ ತಿಂಗಳಿಗೊಮ್ಮೆ ಕನಿಷ್ಠ 3 ವೆಬಿನಾರ್ / ಲೈವ್ ಆನ್‌ಲೈನ್ ತರಗತಿಗಳನ್ನು ಆಯೋಜಿಸುವುದು ಕಡ್ಡಾಯವಾಗಿರುತ್ತದೆ.
8. ಪ್ರತಿ ತಿಂಗಳ ಮೊದಲ ಬುಧವಾರ ಜಿಲ್ಲಾ ಹಂತದ ಸಮಿತಿಯ ಆನ್‌ಲೈನ್ ಸಭೆಯನ್ನು ಹಾಗೂ ಮೂರನೆ ಬುಧವಾರ ಮುಖಾ-ಮುಖಿ ಸಭೆಯನ್ನು ನಿಷ್ಠಾ ನೋಡಲ್ ಅಧಿಕಾರಿಗಳು ಆಯೋಜಿಸಿ ಪ್ರತಿ ಶಾಲೆಯ ಪ್ರತಿ ಶಿಕ್ಷಕರ ತಾಂತ್ರಿಕ ಮತ್ತು ಶೈಕ್ಷಣಿಕ ಅಂಶಗಳನ್ನು ಚರ್ಚಿಸಿ ನಡಾವಳಿ ರಚಿಸುವುದು.
9. ಕಾಲಕಾಲಕ್ಕೆ ಇಲಾಖೆ ಸೂಚಿಸಿದ ಇನ್ನಿತರೆ ಪಾತ್ರ ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುತ್ತಾ ತರಬೇತಿಯ ಯಶಸ್ವಿ ಅನುಷ್ಠಾನಕ್ಕೆ ಸಹಕರಿಸಬೇಕು.

## C) ಸಿ.ಟಿ.ಇ ಚಿತ್ರದುರ್ಗ & ಸಿ.ಟಿ.ಇ ಮೈಸೂರುರವರ ಪಾತ್ರ ಮತ್ತು ಜವಾಬ್ದಾರಿ.

**ವಿಭಾಗವಾರು ತಂಡ (Division Level committee)- 10 ಜನ**

I. ಸಿ.ಟಿ.ಇ ಪ್ರಾಂಶುಪಾಲರು
II. ರೀಡರ್
III. ವಿಷಯ ತಜ್ಞರು (ಅನುವಾದಿತ ತಂಡದ ಸದಸ್ಯರು ಮತ್ತು ಸಿ.ಟಿ.ಇ ಉಪನ್ಯಾಸಕರು) – 8 ಜನ

**ನಿಷ್ಠಾ ಸ್ಟೇಟ್ ಕೊ-ಆರ್ಡಿನೇಟರ್‌ಗಳು**

A. ಸಿ.ಟಿ.ಇ ಮೈಸೂರುರವರಿಗೆ – ಮೈಸೂರು & ಬೆಳಗಾವಿ ವಿಭಾಗ
B. ಸಿ.ಟಿ.ಇ ಚಿತ್ರದುರ್ಗದವರಿಗೆ – ಬೆಂಗಳೂರು & ಕಲಬುರಗಿ ವಿಭಾಗ ಹಂಚಿಕೆ ಮಾಡಲಾಗಿದೆ.

1. ಎನ್.ಸಿ.ಇ.ಆರ್.ಟಿ ನಿರ್ದೇಶನದಂತೆ ನಿಗಧಿತ ಸಮಯದಲ್ಲಿ ಕೋರ್ಸ್‌ನ ಎಲ್ಲಾ ಇ-ಸಂಪನ್ಮೂಲಗಳನ್ನು ಅನುವಾದಿಸಿ ಗುಣಾತ್ಮಕವಾಗಿ ವೀಡಿಯೋಗಳನ್ನು ಸೃಜಿಸಿ ಕೋರ್ಸ್ ಕ್ರಿಯೇಟ್ ಮಾಡುವುದು
2. ಸಿ.ಟಿ.ಇ ಯ ವಿವಿಧ ಅಧಿಕಾರಿಗಳು ಮತ್ತು ವಿಷಯ ಸಂಪನ್ಮೂಲ ವ್ಯಕ್ತಿಗಳು ಹಾಗೂ ವಿಭಾಗ ಹಂತದ ತಾಂತ್ರಿಕ ತಂಡದ ಸದಸ್ಯರು ಸಿ.ಟಿ.ಇ ಹಂತದಲ್ಲಿ ಕಾರ್ಯಕ್ರಮ ಅನುಷ್ಠಾನ ಮತ್ತು ತಾಂತ್ರಿಕ ಬೆಂಬಲ ನೀಡುವುದು.
3. ಪ್ರತಿ ಕೋರ್ಸ್‌ನ ಅನುವಾದಕಾರರು & ಸಿ.ಟಿ.ಇ ಉಪನ್ಯಾಸಕರ ತಂಡದಿಂದ ಜಿಲ್ಲಾ ಹಂತದಿಂದ ಬರುವ ತಾಂತ್ರಿಕ ಮತ್ತು ಶೈಕ್ಷಣಿಕ ಸಮಸ್ಯೆಗಳಿಗೆ ಪರಿಹಾರ ಒದಗಿಸುವುದು. ಎನ್.ಸಿ.ಇ.ಆರ್.ಟಿ ನಿರ್ದೇಶನದಂತೆ ಲೈವ್ ಯೂಟ್ಯೂಬ್ ತರಗತಿಮತ್ತು ವೆಬಿನಾರ್‌ನ್ನು ಕಡ್ಡಾಯವಾಗಿ ಆಯೋಜಿಸುವುದು. ಈ ಕಾರ್ಯವನ್ನು ಸಿ.ಟಿ.ಇ ಪ್ರಾಂಶುಪಾಲರು ಮತ್ತು ರೀಡರ್ ರವರ ಸಮ್ಮುಖದಲ್ಲಿ ನಡೆಸುವುದು.
4. ತಮ್ಮ ವ್ಯಾಪ್ತಿಯ ಜಿಲ್ಲೆಗಳ ಪ್ರತಿ ಮಾಹೆಯ ಪ್ರಗತಿ ಪರಿಶೀಲಿಸುವುದು.
5. ತರಬೇತಿ ಪ್ರಗತಿಯನ್ನು ನಿಗದಿತ ದಿನಾಂಕದೊಳಗೆ ಡಿ.ಎಸ್.ಇ.ಆರ್.ಟಿಗೆ ಸಲ್ಲಿಸುವುದು.
6. ಕಾಲಕಾಲಕ್ಕೆ ಸೂಚಿಸಿದ ಪಾತ್ರ ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುತ್ತಾ ತರಬೇತಿಯ ಯಶಸ್ವಿ ಅನುಷ್ಠಾನಕ್ಕೆ ಸಹಕರಿಸಬೇಕು.

(ಎಂ.ಆರ್. ಮಾರುತಿ)
ನಿರ್ದೇಶಕರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
ಬೆಂಗಳೂರು-85

ಗೆ,

1) ರಾಜ್ಯದ ಎಲ್ಲಾ ಡಯಟ್ ಪ್ರಾಂಶುಪಾಲರುಗಳಿಗೆ ಮುಂದಿನ ಕ್ರಮಕ್ಕಾಗಿ.
2) ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) ಇವರಿಗೆ ಮುಂದಿನ ಕ್ರಮಕ್ಕಾಗಿ.
3) ಪ್ರಾಂಶುಪಾಲರು ಸಿ.ಟಿ.ಇ ಚಿತ್ರದುರ್ಗ ಮತ್ತು ಮೈಸೂರು ರವರಿಗೆ ಮುಂದಿನ ಕ್ರಮಕ್ಕಾಗಿ.
4) ರಾಜ್ಯದ ಎಲ್ಲಾ ಬಿ.ಇ.ಓ ಮತ್ತು ಬಿ.ಆರ್.ಸಿಗಳಿಗೆ ಅಗತ್ಯ ಕ್ರಮಕ್ಕಾಗಿ.

ಪ್ರತಿಯನ್ನು:-

1. ಮಾನ್ಯ ಆಯುಕ್ತರು, ಸಾ.ಶಿ.ಇಲಾಖೆ, ಬೆಂಗಳೂರು ರವರಿಗೆ ಗೌರವಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು ರವರಿಗೆ ಗೌರವಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ಅಪರ ಆಯುಕ್ತರು ಸಾ.ಶಿ.ಇಲಾಖೆ, ಆಯುಕ್ತಾಲಯ, ಧಾರವಾಡ, ಕಲಬುರುಗಿ ರವರಿಗೆ ಗೌರವಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಿದೆ.